ಅಸಲು ದಾವಾ ನಂಃ 19/2023
ಪಿ ಡಬ್ಲ್ಯುಃ 1

ದಿನಾಂಕಃ **01.02.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು.

ಸಾಕ್ಷಿಯ ಮುಖ್ಯವಿಚಾರಣೆ ವಾಟ್ಸ್ ಅಪ್ ವೀಡಿಯೋ ಕಾಲ್ ಮುಖಾಂತರ ತೆಗೆದುಕೊಳ್ಳಲಾಯಿತುಃ

ಮುಖ್ಯವಿಚಾರಣೆ ವಾದಿ ಪರ ಶ್ರೀ ಜಿ ಎಂ ವಿ ವಕೀಲರಿಂದಃ

ನಾನು ಈ ದಾವೆಯಲ್ಲಿ ವಾದಿ ಇದ್ದು, ನನ್ನ ಸಾಕ್ಷ್ಯದ ಮುಖ್ಯವಿಚಾರಣೆಯಾಗಿ ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಪ್ರಮಾಣಪತ್ರದಲ್ಲಿ ಬರೆದಿರುವ ವಿಷಯಗಳು ನನಗೆ ತಿಳಿದಿದೆ ಮತ್ತು ಸತ್ಯವಾಗಿದೆ.

ನಾನು ಈ ದಿನ ನಮ್ಮ ಮದುವೆಯ ಆಮಂತ್ರಣ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 1 ಎಂದು, ರೆಕಾರ್ಡ್ ಆಫ್ ರೈಟ್ಸ್ ನ ಒಂದು ದೃಢಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 2 ಎಂದು, ನಮೂನೆ 4 ರ ದೃಢಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 3 ಎಂದು, ತಮಳವಳ್ಳಿ ಗ್ರಾಮದ ರೆಕಾರ್ಡ್ ಆಫ್ ರೈಟ್ಸ್ ನ ದೃಢಿಕೃತ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 4 ಎಂದು, ಸರ್ವೆ ನಂಬರ್ 160/1 ಇದರ ರೆಕಾರ್ಡ್ ಆಫ್ ರೈಟ್ಸ್ ನ ದೃಢಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 5 ಎಂದು, ಎಂ ಆರ್ ಸಂಖ್ಯೆ 29/2005-06 ಇದರ ಮ್ಯುಟೇಶನ್ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 6 ಎಂದು, ತಮಳವಳ್ಳಿ ಗ್ರಾಮದ ಸರ್ವೆ ನಂಬರ್ 158/3, 158/4, 156/2, 160/1 ಹಾಗೂ 153 ಇವುಗಳ 7 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ- 7 ರಿಂದ 13 ಎಂದು, ಪಟ್ಟಾ ರಸೀದಿ ಪುಸ್ತಕದ ದೃಢಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 14 ಎಂದು, ಎಂ ಆರ್ ಸಂಖ್ಯೆ ಹೆಚ್ 1/2018-19, ಎಂ ಆರ್ ಸಂಖ್ಯೆ ಹೆಚ್ 1/2016-17, ಎಂ ಆರ್ ಸಂಖ್ಯೆ ಪಿ7/2021-22, ಎಂ ಆರ್ ಸಂಖ್ಯೆ ಹೆಚ್2/2021-22 ಇವುಗಳ 4 ಮ್ಯುಟೇಶನ್ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ- 15 ರಿಂದ 18 ಎಂದು, ಸ್ವತ್ತಿನ ಸಂಖ್ಯೆ 150900300300320025 ಇದರ ನಮೂನೆ 9 ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 19 ಎಂದು, ಹಕ್ಕು ಪತ್ರದ ದೃಢಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 20 ಎಂದು, ಸ್ವತಿನ ಕರ ನಿರ್ಧರಣ ದೃಢಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 21 ಎಂದು ಗುರುತಿಸಲಾಯಿತು.

ಅಸಲು ದಾವಾ ನಂಃ 19/2023
ಪಿ ಡಬ್ಲ್ಯುಃ 1

**<u>(ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.)</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ